ಕರ್ನಾಟಕ ಸರಕಾರ

# ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳಗಾವಿ

(ಸ್ವಾಯತ್ತ ಸಂಸ್ಥೆ)

ಡಾ॥ ಬಿ.ಆರ್. ಅಂಬೇಡ್ಕರ ರಸ್ತೆ, ಬೆಳಗಾವಿ-590 001 **ದೂರವಾಣಿ ಸಂಖ್ಯೆ: 0831-2421464/2421453,**

**ಫ್ಯಾಕ್ಸ ನಂ 0831-2403126, Website: www.bimsbelgaum.org E.Mail: belgaum.bims@gmail.com**

ಸಂಖ್ಯೆ: ಬಿಮ್ಸ್/ಸಿಬ್ಬಂದಿ(1)/511/2014-15 ದಿನಾಂಕ: 24-03-2017

## ಕಚೇರಿ ಅಧೀಕೃತ ಜ್ಞಾಪನಾ

**ವಿಷಯ:** ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳಗಾವಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಶುಶ್ರೂಷಾ ಹುದ್ದೆಗೆ ಆಯ್ಕೆ ಹೊಂದಿದ ಅಭ್ಯರ್ಥಿಗಳ ನೇಮಕಾತಿ ಕುರಿತು.

**ಉಲ್ಲೇಖ:** 1) ವೈದ್ಯಕೀಯ ಶಿಕ್ಷಣ ಇಲಾಖೆಯ ಪ.ಸಂ. ಆಕುಕ 394 ಎಂ.ಪಿ.ಎಸ್. 2014 ದಿನಾಂಕ: 04-12-2014

2) ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಬೆಂಗಳೂರು ಇವರ ಪ.ಸಂ. ಇಡಿ/ಕೆಇಎ/ಆಡಳಿತ/45/ 14-15, ದಿನಾಂಕ: 26-11-2015.

3) ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ನಿರ್ವಹಿಸಲಾದ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಪ್ರಕಟಣೆಯ ಅಧಿಸೂಚನೆ ದಿನಾಂಕ: 26-02-2016.

4) ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಣೆಯ ಅಧಿಸೂಚನೆ ಸಂಖ್ಯೆ: ಇಡಿ/ಕೆಇಎ/ಆಡಳಿತ/ ಸಿ.ಆರ್/45/15-16, ದಿನಾಂಕ: 23-09-2016.

5) ಆಯ್ಕೆ ಪಟ್ಟಿ ಪ್ರಕಟಣೆ ಅಧಿಸೂಚನೆ ಸಂಖ್ಯೆ: ಇಡಿ/ಕೆಇಎ/ ಆಡಳಿತ/ಸಿ.ಆರ್45/ 15-16, ದಿನಾಂಕ: 24-10-2016.

6) ದಿನಾಂಕ: 01-12-2016 ರಂದು ಆಡಳಿತ ಮಂಡಳಿಯ ನಡವಳಿಗಳು.

********

ಮೇಲ್ಕಾಣಿಸಿದ ಉಲ್ಲೇಖಿತ 1 ರ ಪತ್ರದಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಬೆಂಗಳೂರು ಇವರ ಮೂಲಕ ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳಗಾವಿಗೆ ಶುಶ್ರೂಷಕರ - ಹುದ್ದೆಗೆ ಆಯ್ಕೆ ಹೊಂದಿರುವ ಕೆಳಕಂಡ ಅಭ್ಯರ್ಥಿಗಳಿಗೆ ವೇತನ ಶ್ರೇಣಿ ರೂ. 17650-450-19000-500-21000-600-24600-700-28800-800-32000 ರಲ್ಲಿ ಕರ್ನಾಟಕ ನಾಗರಿಕ ಸೇವಾ (ಅರ್ಹತಾ ಪರೀಕ್ಷಾರ್ಥ) ನಿಯಮಾವಳಿ 1977 ರ ನ್ವಯ ಎರಡು ವರ್ಷಗಳ ಖಾಯಂ ಪೂರ್ವ ಸೇವಾ ಅವಧಿಯ ಷರತ್ತಿಗೆ ಒಳಪಟ್ಟು ತಾತ್ಕಾಲಿಕವಾಗಿ ನೇಮಕಾತಿ ಮಾಡಿದೆ.

| ಕ್ರ ಸಂ | ರಜಿಸ್ಟರ ನಂ. | ಅಭ್ಯರ್ಥಿಯ ಹೆಸರು ಹಾಗೂ ವಿಳಾಸ | ಜನ್ಮ ದಿನಾಂಕ | ವಿದ್ಯಾರ್ಹತೆ | ಆಯ್ಕೆ ಹೊಂದಿದ ಪ್ರವರ್ಗ | ಷರಾ |
|---|---|---|---|---|---|---|
| 135 | PA130 | ರಾಜೇಂದ್ರ ಪೌಲ | 15/11/1980 | ಡಿಪ್ಲೋಮಾ ನರ್ಸಿಂಗ್ | GM | |
| 136 | RA113 | ಅರುಣಕುಮಾರ | 01/06/1981 | ಡಿಪ್ಲೋಮಾ ನರ್ಸಿಂಗ್ | 3B | |
| 17 | FC477 | ಅಜರುದ್ದೀನ ಗೊಂಡೆಗಾರ | 28/07/1985 | ಬಿ.ಎಸ್‌ಸಿ ನರ್ಸಿಂಗ್ | GM/RL | |

**ಈ ನೇಮಕಾತಿಯು ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಗೊಂಡಿರುತ್ತದೆ.**

1) ನೇಮಕಾತಿಯು ಗೌರ್‍ವಾನಿತ ಕರ್ನಾಟಕ ಉಚ್ಚನ್ಯಾಯಾಲಯ ಮತ್ತು ಕರ್ನಾಟಕ ಆಡಳಿತ ಮಂಡಳಿಯ ಹಾಗೂ ನ್ಯಾಯವಾದಿಗಳ ರಿಟ್ ಅರ್ಜಿ ಸಂಖ್ಯೆ: 8653-8655/2016, 114665-114725/ 2015, 114155/15, 1142258-114230/2015, 113614/2015 ಮತ್ತು 113644-113674/2015, ರ ಅಂತಿಮ ತೀರ್ಮಾನಕ್ಕೆ ಒಳಪಟ್ಟಿದ್ದು, ಕಾರಣ ಅಭ್ಯರ್ಥಿಯು ನ್ಯಾಯಾಲಯಗಳ ಆದೇಶಕ್ಕೆ ಬದ್ಧರಾಗಿರತಕ್ಕದ್ದು.

2) ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಬೆಂಗಳೂರು ಇವರು ಹೊರಡಿಸಲಾಗಿರುವ ಅರ್ಹತೆ ಹಾಗೂ ಮೀಸಲಾತಿಯನುಸಾರ ಕರ್ನಾಟಕ ನಾಗರಿಕ ಸೇವಾ (ಜೇಷ್ಠತೆ) ನಿಯಮಾವಳಿ 1957 ರನ್ವಯ ಸೇವಾ ಜೇಷ್ಠತೆ ಪರಿಗಣಿಸಲಾಗುವುದು.

3) ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗುವಾಗ ಆಯ್ಕೆ ಕುರಿತು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಸಲ್ಲಿಸಲಾದ ಮೂಲದಾಖಲಾತಿಗಳ ದೃಢೀಕರಿತ ಛಾಯಾ ಪ್ರತಿಗಳೊಂದಿಗೆ ಹಾಜರಾಗತಕ್ಕದ್ದು.

4) ದೈಹಿಕ ಅರ್ಹತಾ ಪ್ರಮಾಣ ಪತ್ರ (Physical fitness Certificate) ಸರ್ಕಾರಿ ಜಿಲ್ಲಾ ಆಸ್ಪತ್ರೆಯ ಜಿಲ್ಲಾ ಸರ್ಜನರಿಂದ ಪಡೆಯುವುದು. ಮಹಿಳಾ ಅಭ್ಯರ್ಥಿಯು 12 ವಾರಗಳ ಅಥವಾ ಮೇಲ್ಪಟ್ಟು ಗರ್ಭಿಣಿ ಆಗಿದ್ದಲ್ಲಿ ಅಂಥವರು ಅವರ ಪ್ರಸವದ ನಂತರ ವೈದ್ಯಕೀಯ ಪರೀಕ್ಷೆಗೆ ಒಳಪಟ್ಟು ದೈಹಿಕ ಅರ್ಹ ಪ್ರಮಾಣ ಪತ್ರದೊಂದಿಗೆ ಕರ್ತವ್ಯಕ್ಕೆ ಹಾಜರಾಗುವುದು. (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯದ ಸುತ್ತೋಲೆ ಕ್ರ. ಎಸ್‌ಆರ್‌ಎಸ್(2)/72/98-99 ದಿನಾಂಕ: 16-11-1998)

5) ಅಭ್ಯರ್ಥಿಯು ಈ ನೇಮಕಾತಿ ಆದೇಶದ ಪ್ರತಿ ಸ್ವೀಕರಿಸಿದ 15 ದಿನಗಳ ಒಳಗಾಗಿ ನಿರ್ದೇಶಕರು ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳಗಾವಿ ಇವರಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡು ಚಲನಾದೇಶ ಪಡೆದುಕೊಂಡು ವೈದ್ಯಕೀಯ ಅಧೀಕ್ಷಕರು ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಆಸ್ಪತ್ರೆ ಬೆಳಗಾವಿ ಇವರಲ್ಲಿ ವರದಿ ಮಾಡಿಕೊಂಡ ನಂತರ ಆಸ್ಪತ್ರೆಯ ಪರಿಚಾರಿಕಾ ಅಧಿಕಾರಿಣಿ ದರ್ಜೆ-1 ಇವರ ಅಧೀನಕ್ಕೆ ಒಳಪಡಿಸಿದೆ.

6) ಒಂದು ವೇಳೆ ನಿಗದಿತ ಅವಧಿಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ವಿಫಲರಾದಲ್ಲಿ ನೇಮಕಾತಿಯು ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರ ನಿಯಮ 18(3) ರನ್ವಯ ಯಾವುದೇ ಮುನ್ಸೂಚನೆ ಇಲ್ಲದೇ ರದ್ದು ಪಡಿಸಲಾಗುವುದು.

7) ಅಭ್ಯರ್ಥಿಯು ಸಂಸ್ಥೆಯ ಬೈ-ಲಾ ಹಾಗೂ ಸರ್ಕಾರದ ಮಾರ್ಗಸೂಚಿನುಸಾರ ಸಂಸ್ಥೆಯು ಕಾಲಕಾಲಕ್ಕೆ ಹೊರಡಿಸುವ ನಿಯಮಾವಳಿಗೆ ಬದ್ಧರಾಗಿರತಕ್ಕದ್ದು.

8) ಅಭ್ಯರ್ಥಿಯು ನೇಮಕಾತಿಗೆ ಸಂಬಂಧಿಸಿದಂತೆ ಸಲ್ಲಿಸಿರುವ ದಾಖಲಾತಿಗಳಲ್ಲಿ ವ್ಯತ್ಯಾಸ / ತಪ್ಪು ಎಂದು ಕಂಡುಬಂದಲ್ಲಿ ಮತ್ತು ತಪ್ಪು ಮಾಹಿತಿ ಒದಗಿಸಿದಲ್ಲಿ ಅಂಥವರನ್ನು ನಿಯಮಾನುಸಾರ ಶಿಸ್ತು ಕ್ರಮಕ್ಕೆ ಒಳಪಡಿಸಿ ಸೇವೆಯಿಂದ ವಜಾಗೊಳಿಸಲು ಕ್ರಮ ಜರುಗಿಸಲಾಗುವುದು.

9) ಕರ್ನಾಟಕ ಸಿವ್ಹಿಲ್ ಸೇವಾ (ಸೇವಾ ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ಪರೀಕ್ಷಾ ನಿಯಮಾವಳಿ 1984 ರ ನಿಯಮ 5(5) ರನ್ವಯ ವಿನಾಯಿತಿ ಹೊಂದಿದ ಹೊರತು ಪಡಿಸಿ ಉಳಿದ ಅಭ್ಯರ್ಥಿಗಳು "ಕನ್ನಡ ಭಾಷಾ ಪರೀಕ್ಷೆಯಲ್ಲಿ" ಕಡ್ಡಾಯವಾಗಿ ಉತ್ತೀರ್ಣರಾಗತಕ್ಕದ್ದು.

10) ಮೇಲ್ಕಾಣಿಸಿದ ಷರತ್ತು ನಿಬಂಧನೆಗಳನ್ನು ಒಪ್ಪಿಕೊಂಡ ಬಗ್ಗೆ ಕರ್ತವ್ಯಕ್ಕೆ ಹಾಜರಾಗುವ ಸಮಯದಲ್ಲಿ ರೂ. 100/- ಮೌಲ್ಯದ ನ್ಯಾಯಾಲಯದ ಛಾಪಾ ಕಾಗದದಲ್ಲಿ ಪ್ರತಿಜ್ಞಾ ಪತ್ರ ನಿರ್ದೇಶಕರು, ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳಗಾವಿ ಇವರಿಗೆ ಸಲ್ಲಿಸುವುದು

**ಕರ್ತವ್ಯಕ್ಕೆ ಹಾಜರಾಗುವಾಗ ಈ ಕೆಳಗಿನ ಘೋಷಣಾ/ಪ್ರತಿಜ್ಞಾ ವಿಧಗಳನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು**

1) ಆಸ್ತಿ ಮತ್ತು ಋಣ ಪಟ್ಟಿಗಳ ಘೋಷಣಾ ಪತ್ರ ಸಲ್ಲಿಸುವುದು.

2) ಒಂದಕ್ಕಿಂತ ಹೆಚ್ಚು ಪತಿ /ಪತ್ನಿ ಹೊಂದದೇ ಇರುವ ಕುರಿತು ಘೋಷಣಾ ಪತ್ರ ಸಲ್ಲಿಸುವುದು.

3) ಸ್ವಂತ ಗ್ರಾಮ/ಪಟ್ಟಣ, ಜಿಲ್ಲೆಯ ಘೋಷಣಾ ಪತ್ರ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

4) ಕುಟುಂಬದ ಸದಸ್ಯರ ಘೋಷಣಾ ಪತ್ರ ಸಲ್ಲಿಸುವುದು

5) ಇತ್ತೀಚಿನ ಗುಣ ಮತ್ತು ಪೂರ್ವ ಚಾರಿತ್ರ್ಯ ಕುರಿತು ಗಣ್ಯರಿಂದ ಪಡೆದ ಪ್ರಮಾಣ ಪತ್ರ,

6) ಶೈಕ್ಷಣಿಕ ಹಾಗೂ ಇತರೆ ಎಲ್ಲ ಅಗತ್ಯ ಮೂಲ ದಾಖಲಾತಿಗಳೊಂದಿಗೆ ಕರ್ತವ್ಯಕ್ಕೆ ಹಾಜರಾಗತಕ್ಕದ್ದು.

ಪ್ರತಿ : ಮುಖ್ಯ ಆಡಳಿತಾಧಿಕಾರಿಗಳು/ಆರ್ಥಿಕ ಸಲಹೆಗಾರರು, ಬಿಮ್ಸ್, ಬೆಳಗಾವಿ.

ಪ್ರತಿ ; ವೈದ್ಯಕೀಯ ಅಧೀಕ್ಷಕರು, ಬಿಮ್ಸ್ ಆಸ್ಪತ್ರೆ, ಬೆಳಗಾವಿ.

ಪ್ರತಿ : ಸಹಾಯಕ ಆಡಳಿತಾಧಿಕಾರಿಗಳು, ಬಿಮ್ಸ್ ಆಸ್ಪತ್ರೆ, ಬೆಳಗಾವಿ.

ಪ್ರತಿ : ಪರಿಚಾರಿಕಾ ಅಧಿಕಾರಣಿ, ಬಿಮ್ಸ್ ಆಸ್ಪತ್ರೆ, ಬೆಳಗಾವಿ.

ಪ್ರತಿ : ಲೆಕ್ಕ ಪತ್ರ ವಿಭಾಗ, ಬಿಮ್ಸ್, ಬೆಳಗಾವಿ.

**ಪ್ರತಿ ಕೆಳಗೆ ಕಾಣಿಸಿದ ಅಧಿಕಾರಿಗಳ ಅವಗಾಹನೆಗಾಗಿ ಗೌರವಾದರಗಳೊಂದಿಗೆ ಒಪ್ಪಿಸಿದೆ.**

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ) ಬಹುಮಹಡಿಗಳ ಕಟ್ಟಡ, 4ನೇ ಹಂತ, 6ನೇ ಮಹಡಿ, ಡಾ. ಅಂಬೇಡ್ಕರ ವೀದಿ, ಬೆಂಗಳೂರು.
2) ನಿರ್ದೇಶಕರು, ವೈದ್ಯಕೀಯ ಶಿಕ್ಷಣ, ಆನಂದರಾವ್ ವೃತ್ತ, ಬೆಂಗಳೂರು.

**ನಿರ್ದೇಶಕರು,**
**ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ,**
**ಬೆಳಗಾವಿ.**

DESPATCHED
On 25.08.17
Clerk,
BIMS, Belgaum